**ಸಾಕ್ಷಿಗೆ ದಿನಾಂಕಃ06-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. KLR ವಕೀಲರಿಂದ ::**

1 ನೇ ವಾದಿಯ ಪರಿಚಯ ನನಗೆ ಇರುತ್ತದೆ. 1 ನೇ ವಾದಿ ನನಗೆ ಚಿಕ್ಕಮ್ಮ ಆಗಬೇಕು. 1 ನೇ ವಾದಿಯು ನನ್ನ ತಂದೆಯ ತಮ್ಮ ಹಾಲಪ್ಪನ ಹೆಂಡತಿ ಆಗಿರುತ್ತಾರೆ. 1 ನೇ ವಾದಿಯ ಮಗನ ಹೆಸರು ವಿಶ್ವನಾಥ/2 ನೇ ವಾದಿ ಆಗಿರುತ್ತದೆ. ನನ್ನ ತಂದೆಗೆ ಇಬ್ಬರು ಸಹೋದರರಿದ್ದು, ವನಜಾಕ್ಷಮ್ಮ ಎನ್ನುವ ಒಬ್ಬ ಸಹೋದರಿ ಇರುತ್ತಾರೆ. ಸದರಿ ವನಜಾಕ್ಷಮ್ಮ ಈಗಲೂ ಸಹ ಜೀವಂತವಾಗಿದ್ದು, ಬಿಲ್ಲೇನಹಳ್ಳಿಯಲ್ಲಿ ವಾಸ ಮಾಡಿಕೊಂಡಿರುತ್ತಾರೆ. 1 ನೇ ವಾದಿಯ ಗಂಡ ಹಾಲಪ್ಪ ರವರ ಅವರ ಜೀವಿತಾ ಅವಧಿಯಲ್ಲಿ ಎಲ್ಲಿ ವಾಸ ಮಾಡಿಕೊಂಡಿದ್ದರು ಎಂದು ಅವರ ಸಹೋದರರಿಗೆ ತಿಳಿದಿತ್ತು ಎಂದರೆ ಸರಿ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿ. ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಲ್ಲಿ ನನ್ನ ತಂದೆಯ ಸಹೋದರ ಸಹೋದರಿಯರಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿ. ವನಜಾಕ್ಷಮ್ಮ ಮತ್ತು ಅವರ ತಂದೆ ಸೇರಿ ಹಾಲಪ್ಪ ರವರಿಗೆ ಮೋಸ ಮಾಡುವ ದುರುದ್ದೇಶದಿಂದ ಸುಳ್ಳು ವಿಭಾಗಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಎಲ್ಲಾ ಕುಟುಂಬದ ಸದಸ್ಯರು ಸದರಿ ಹಾಲಪ್ಪನಿಗೆ ಮೋಸ ಮಾಡಿ ದಾವಾ ಸ್ವತ್ತನ್ನು ಕಬಳಿಸಿರುತ್ತಾರೆ ಎಂದರೆ ಸರಿ. ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆ ಇಲ್ಲದೇ ವನಜಾಕ್ಷಮ್ಮ ರವರಿಗೆ ಯಾವುದೇ ಆಸ್ತಿ ಮಾರುವ ಹಕ್ಕು ಇರುವುದಿಲ್ಲ ಎಂದರೆ ಸರಿ. ವನಜಾಕ್ಷಮ್ಮ ನಿಂದ ಆಸ್ತಿಯನ್ನು ಖರೀದಿ ಮಾಡಿರುವ ವ್ಯಕ್ತಿಗಳಿಗೆ ಹಾಲಪ್ಪನ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ. ವನಜಾಕ್ಷಮ್ಮ, ಅವರ ತಂದೆ ಮತ್ತು ದಾವಾ ಸ್ವತ್ತಿನ ಖರೀದಿದಾರರು ಶಾಮಿಲಾಗಿ ದಾವಾ ಆಸ್ತಿಯನ್ನು ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಾದಿಗಳಿಗೆ ದಾವಾ ಆಸ್ತಿಯಲ್ಲಿ ಭಾಗ ಕೊಡಲು ನನದ್ದು ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸರಿ.

**(ಪಾಟೀ ಸವಾಲಿಗೆ 1 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: